ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಪೌರಾಡಳಿತ, ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಬೆಂಗಳೂರು ಜಲಮಂಡಳಿ ಸಚಿವರು): ಮಾನ್ಯ ಅಧ್ಯಕ್ಷರೆ, ತುಮಕೂರಿನ ವಕೀಲರು, ಏನು ವಕೀಲರ ಸಂಘದ ಕಟ್ಟಡ ಬೇಕು ಎಂದು ಆಗ್ರಹ ಮಾಡಿ ಈಗ ನ್ಯಾಯಾಲಯದ ಕಲಾಪಗಳನ್ನು ಬಹಿಷ್ಕರಿಸುವ ತೀರ್ಮಾನವನ್ನೇನು ತೆಗೆದುಕೊಂಡಿದ್ದಾರೆ, ಈ ಕುರಿತು ನಾನು ಮಾನ್ಯ ಲೋಕೋಪಯೋಗಿ ಸಚಿವರ ಜೊತೆಗೆ ಮಾತನಾಡಿದ್ದೇನೆ. ಅದಲ್ಲದೆ ಲೋಕೋಪಯೋಗಿ ಇಲಾಖೆ ಅಧಿಕಾರಿಗಳ ಜೊತೆಗೂ ಸಹ ಮಾತನಾಡಿದ್ದೇನೆ. ಈ ಕೂಡಲೇ ಅಲ್ಲಿ ವಕೀಲರ ಸಂಘದ ಕಟ್ಟಡವನ್ನು ಕಟ್ಟಲಿಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆಂದು ಈಗಾಗಲೇ ಅವರಿಗೆ ಸಂದೇಶವನ್ನು ಕಳುಹಿಸಿದ್ದೇವೆ. ವಕೀಲರ ಕಟ್ಟಡ ಕಟ್ಟುವುದಕ್ಕೆ ಪ್ರಾರಂಭ ಮಾಡುತ್ತೇವೆ. ತುರುವೇಕೆರೆಯದ್ದೂ ಕೂಡ, ಏನೊಂದು ಬಿಲ್ ಬಾಕಿ ಇತ್ತೋ, ಅದನ್ನೂ ಕೂಡ ರಿಲೀಸ್ ಮಾಡಿಸಿ, ಕಟ್ಟಡ ನಿರ್ಮಾಣವನ್ನು ಮುಂದುವರೆಸುತ್ತೇವೆ.

ಅಧ್ಯಕ್ಷರು: ಮಾನ್ಯ ರೇವಣ್ಣ ಮತ್ತು ಮಾನ್ಯ ಶಿವಲಿಂಗೇಗೌಡರು, ಇಬ್ಬರದೂ ಒಂದೇ ವಿಚಾರ ಇದೆ. ದಯವಿಟ್ಟು ಪ್ರಸ್ತಾಪಿಸಿ.

ಇ) ವಿಷಯ : ಕರ್ನಾಟಕ ರಾಜ್ಯ ಪರಿಸರ ನಿಯಂತ್ರಣ ಮಂಡಳಿಯು ರಾಜ್ಯದ 3700 ಕ್ರಷರ್‌ಗಳನ್ನು ಮುಚ್ಚುವಂತೆ ಆದೇಶಿಸಿರುವುದರಿಂದ 10 ಲಕ್ಷ ಕುಟುಂಬಗಳಿಗೆ ತೊಂದರೆಯಾಗುತ್ತಿರುವ ಕುರಿತು.

ಶ್ರೀ ಹೆಚ್.ಡಿ. ರೇವಣ್ಣ [ಹೊಳೆನರಸೀಪುರ]: ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಪರಿಸರ ಇಲಾಖೆಯಿಂದ ಇವತ್ತು 3700 ಕ್ರಷರ್‌ಗಳಲ್ಲಿ ಕೆಲಸ ಮಾಡುತ್ತಿರುವ 10 ಲಕ್ಷ ಕುಟುಂಬಗಳಿಗೆ ಇವತ್ತು ತೊಂದರೆಯಾಗುತ್ತಿದೆ. ವಿದ್ಯುತ್ ಇಲಾಖೆಗೆ 11 ಕೋಟಿ ರೂ.ಗಳ ನಷ್ಟವುಂಟಾಗುತ್ತಿದೆ. 3700 ಕ್ರಷರ್‌ಗಳಿಂದ ರಾಜ್ಯ ಸರ್ಕಾರಕ್ಕೆ ಸುಮಾರು 150–160 ಕೋಟಿ ರೂ.ಗಳ ನಷ್ಟವಾಗುತ್ತಿದೆ. ಇವತ್ತು ಸುಮಾರು 1400–1500 ಕೋಟಿ ರೂ.ಗಳನ್ನು invest ಮಾಡಿ, 3700 ಕ್ರಷರ್‌ಗಳನ್ನು ನಿರುದ್ಯೋಗಿ ಯುವಕರುಗಳೇ ಇವತ್ತು ನಡೆಸುತ್ತಿದ್ದಾರೆ. ಅದರ ಬಗ್ಗೆ ನ್ಯಾಯಾಲಯಕ್ಕೆ ಸರಿಯಾದ ರೀತಿಯಲ್ಲಿ ಇಲಾಖೆಯವರು ಮಾಹಿತಿ ಕೊಡದೆ, ಈ 3700 ಕ್ರಷರ್‌ಗಳಲ್ಲಿ ಕೆಲಸ

ಮಾಡುತ್ತಿರುವ 10 ಲಕ್ಷ ನೌಕರರ ಕುಟುಂಬದವರು ಇವತ್ತು ಬೀದಿ ಪಾಲಾಗಿದ್ದಾರೆ. ಬೆಂಗಳೂರು ನಗರದಲ್ಲಿ ಇವತ್ತು ಕಟ್ಟಡ ಸಾಮಗ್ರಿಯಾದ ಜಲ್ಲಿ ರೇಟ್ 10 ರೂ. ಇದ್ದದ್ದು ಇವತ್ತು 20 ರೂ. ಆಗಿದೆ. ಅಷ್ಟು ದುಡ್ಡು ಕೊಟ್ಟರೂ ಅದು ಸಿಗುತ್ತಿಲ್ಲ. ಆದ್ದರಿಂದ ದಯಮಾಡಿ ಕೂಡಲೇ ಮಾನ್ಯ ಕಾನೂನು ಸಚಿವರು ಈ ಬಗ್ಗೆ ಕ್ರಮ ತೆಗೆದುಕೊಂಡು 3700 ಕ್ರಷರ್‌ಗಳನ್ನು ಉಳಿಸಬೇಕು. ಏಕೆಂದರೆ, ಇಲಾಖೆಯ ಕೆಲಸಗಳೂ ಸಹಾ ನಿಂತು ಹೋಗಿವೆ. ಒಂದು ಕಡೆ ಕೂಲಿ ಕಾರ್ಮಿಕರಿಗೆ ಊಟಕ್ಕೆ ಇಲ್ಲದೆ ತೊಂದರೆಯಾಗಿದೆ. ಇನ್ನೊಂದು ಕಡೆ ಸರ್ಕಾರಕ್ಕೂ ಸಹ ಸುಮಾರು 150–160 ಕೋಟಿ ರೂ.ಗಳಷ್ಟು ನಷ್ಟವಾಗುತ್ತಿದೆ. ಇವತ್ತು 1400 ಕೋಟಿ ರೂ.ಗಳನ್ನು ಬ್ಯಾಂಕಿನಿಂದ ಇಂಟರೆಸ್ಟ್ ಕೊಟ್ಟು ತೆಗೆದುಕೊಂಡು ಬಂದು ಈ ಕ್ರಷರ್‌ಗಳನ್ನು ಹಾಕಿದ್ದಾರೆ. ಅವರಿಗೂ ಸಹ ನಷ್ಟವಾಗುತ್ತಿದೆ. ಇದರ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಕಾನೂನು ಸಚಿವರನ್ನು ಕೋರುತ್ತೇನೆ.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಪೌರಾಡಳಿತ, ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಬೆಂಗಳೂರು ಜಲಮಂಡಳಿ ಸಚಿವರು): ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಇದನ್ನು ಪ್ರಸ್ತಾಪ ಮಾಡಿದ್ದಾರೆ. ಅದೇ ವಿಚಾರವನ್ನು ಪ್ರಸ್ತಾಪಿಸಲು ಇನ್ನಿಬ್ಬರು ಸದಸ್ಯರೂ ಕೋರಿದ್ದರು. ಕ್ರಷರ್‌ಗಳನ್ನು ಮುಚ್ಚಲಾಗುತ್ತಿದೆ, ಅದಕ್ಕೆ ಏನು ಮಾಡಬೇಕು? ಎಂಬ ವಿಚಾರವನ್ನೇ ಅವರೂ ಸಹ ಪ್ರಸ್ತಾಪಿಸಿದ್ದಾರೆ. ಅದಕ್ಕೆ ಉತ್ತರ ಕೊಡುತ್ತೇನೆ, ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಇದು ಚರ್ಚೆಯ ಸಂದರ್ಭವಲ್ಲ. ಒಂದೇ ಒಂದು ವಿಚಾರವನ್ನು ಪ್ರಸ್ತಾಪಿಸಿದ್ದಾರೆ. Stone crushers ಮುಚ್ಚಲಾಗಿದೆ...

ಶ್ರೀ ನೆ.ಲ.ನರೇಂದ್ರಬಾಬು: ನಾನು ಕೇಳಬೇಕಾಗಿದ್ದಂತಹ ಅಂಶವನ್ನು ಅವರು ಕೇಳಿಲ್ಲ. ಆದ್ದರಿಂದ ನಾವೂ ಸಹ ಮಾತನಾಡಬೇಕೆಂದಿದ್ದೇವೆ. ಇದಕ್ಕಾಗಿ ಬೆಳಗ್ಗಿನಿಂದ ಕಾದಿದ್ದೇವೆ.

ಅಧ್ಯಕ್ಷರು: ಆಯಿತು, ಅದೇ ವಿಚಾರ ನೀವೂ ಕೇಳಿಬಿಡಿ.

ಶ್ರೀ ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮಿ ಲೇಔಟ್): ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನೋಟಿಸ್ ಕೊಟ್ಟಿರುವ ಮೇರೆಗೆ ಇವತ್ತು ಜಿಲ್ಲಾಧಿಕಾರಿಗಳು ಬೀಗವನ್ನು ಜಡಿದಿದ್ದಾರೆ. ಇದರಿಂದ ಹೊರ ರಾಜ್ಯಕ್ಕೆ ಲಾಭವಾಗುತ್ತಿದೆ, ನಮಗೆ ನಷ್ಟವಾಗುತ್ತಿದೆ. ಹೊಸೂರು ಸುತ್ತಮುತ್ತಲ ಕಡೆಗಳಿಂದ ನಮ್ಮಲ್ಲಿಗೆ ಈಗ ಜಲ್ಲಿ ಬರುತ್ತಿದೆ. ಒರಿಸ್ಸಾ, ರಾಜಾಸ್ತಾನ, ಮಹಾರಾಷ್ಟ್ರ, ಮತ್ತು ತಮಿಳುನಾಡಿನಲ್ಲಿ ಇದರ ಬಗ್ಗೆ ನೀತಿಯೊಂದು ಇದೆ. ಆದರೆ ಇಲ್ಲಿ ಆ ರೀತಿ ಇಲ್ಲ. 2009ರಲ್ಲಿ ಕೊಟ್ಟಿದ್ದಕ್ಕೆ ಸ್ವಲ್ಪ ನಿಧಾನ ಮಾಡಿ ಇವತ್ತೊಂದು ನೀತಿಯೊಂದನ್ನು ತಂದಿದ್ದರೆ, ಬಹುಶ: ಇವತ್ತು ಇಂತಹ ದುಸ್ಥಿತಿಗೆ ಬರುತ್ತಿರಲಿಲ್ಲ. ಇವತ್ತು ಪ್ರತಿಯೊಂದು ಕಾಮಗಾರಿ ಜಲ್ಲಿ ಇಲ್ಲದೆ ಕುಂಠಿತವಾಗಿದೆ.

ಅಧ್ಯಕ್ಷರು: ಈಗಾಗಲೇ ಅದರ ಬಗ್ಗೆ ಹೇಳಿದ್ದಾರೆ.

ಶ್ರೀ ನೆ.ಲ. ನರೇಂದ್ರಬಾಬು: ದಯವಿಟ್ಟು ಸರ್ಕಾರ ತ್ವರಿತವಾಗಿ ಸಮರೋಪಾದಿಯಲ್ಲಿ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಎಂಬುದನ್ನು ಹೇಳಬೇಕು. ಇವತ್ತು ಕ್ರಮ ತೆಗೆದುಕೊಳ್ಳದಿದ್ದರೆ ಜನಗಳಿಗೆ ಹೊರೆಯಾಗುತ್ತದೆ, ಅಭಿವೃದ್ಧಿ ಕೆಲಸಗಳು ಸ್ಥಗಿತವಾಗುತ್ತದೆ.

ಅಧ್ಯಕ್ಷರು: ಮಾನ್ಯ ಶಿವಲಿಂಗೇಗೌಡರೆ, ನೀವು ಏನಾದರೂ ಹೇಳುವುದಿದೆಯೇ?

ಶ್ರೀ ಕೆ.ಎಂ. ಶಿವಲಿಂಗೇಗೌಡ: ನಮ್ಮ ನಾಯಕರು ಏನು ಹೇಳಿದ್ದಾರೋ, ಅದೇ ವಿಚಾರ ನಮ್ಮದೂ ಸಹ ಆಗಿದೆ. ಮಾನ್ಯ ಸಚಿವರು ಉತ್ತರ ಕೊಡಲಿ.

ಅಧ್ಯಕ್ಷರು: ಮಾನ್ಯ ಸಚಿವರೆ, ತಾವು ಉತ್ತರ ಕೊಡಿ.

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದ ರೇವಣ್ಣನವರು, ಶಿವಲಿಂಗೇಗೌಡರು, ನರೇಂದ್ರ ಬಾಬುರವರು ಪ್ರಸ್ತಾಪ ಮಾಡಿದ್ದಾರೆ. ಈ ಸ್ಟೋನ್ ಕ್ರಷರ್ಸ್‌ನ್ನು ರಾಜ್ಯದಲ್ಲಿ ಮುಚ್ಚುವುದಕ್ಕೆ ಇವತ್ತು ಪೊಲ್ಯುಷನ್ ಕಂಟ್ರೋಲ್ ಬೋರ್ಡ್ ನೋಟಿಸ್ ಕೊಟ್ಟಿದೆ. ಅದಕ್ಕೆ ಕಾರಣವೇನೆಂದರೆ, ರಾಜ್ಯದ ಉಚ್ಚ ನ್ಯಾಯಾಲಯ ಹಿಂದೆ ಕೊಟ್ಟಂತ ಒಂದು

ತೀರ್ಮ, ಆದಾದ ನಂತರ ಇವರೇ ಸುಪ್ರೀಂ ಕೋರ್ಟಿಗೆ ಸ್ಟೋನ್ ಕ್ರಷರ್ಸ್ ಅವರು ಒಂದು ಅರ್ಜಿ ಹಾಕಿಕೊಂಡಿದ್ದರು, ಅದು ಕೂಡ ಇವತ್ತು ರಿಜೆಕ್ಟ್ ಆಗಿದೆ, ಈ ಹಿನ್ನಲೆಯಲ್ಲಿ ಬಹಳ ದಿವಸಗಳಿಂದ ಸ್ಟೋನ್ ಕ್ರಷರ್ಸ್ ನೀತಿಯಾಗಬೇಕೆಂದು ಎಲ್ಲರೂ ಕೇಳುತ್ತಿದ್ದರು. ಆ ನೀತಿಯನ್ನು ಸರ್ಕಾರ ರಚಿಸಿ ಅಂತಿಮ ಹಂತದಲ್ಲಿದೆ. ಅದರ ಜೊತೆ ಜೊತೆಗೆ ಮುಂದಿನ ವಾರ ಅಗತ್ಯವಿರುವ ಶಾಸನವನ್ನು ಕೂಡ ಸದನದಲ್ಲಿ ತರಲಿದ್ದೇವೆ. ಶಾಸನಬದ್ಧವಾದ ಒಂದು ರಕ್ಷಣೆಯನ್ನು ಕೊಟ್ಟು ಈ ಸ್ಟೋನ್ ಕ್ರಷರ್ಸ್ ಕೂಡ ನಿಯಮಾನುಸಾರ ಮಾಡಲು ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಇದಕ್ಕೆ ನೀತಿ ಮತ್ತು ಶಾಸನ ಎರಡನ್ನೂ ತರುತ್ತಿದ್ದೇವೆ, ಯಾವ್ಯಾವ ರೀತಿ ಮಾಡಬೇಕೆಂದು ಹೈಕೋರ್ಟಿನ ಏನೊಂದು ಡೈರೆಕ್ಷನ್ ಇದೆ, ಹಲವರ ಜೊತೆ ಚರ್ಚೆ ಮಾಡಿ, ಅಭಯಚಂದ್ರರವರು ಕೂಡ ಇಲ್ಲೇ ಇದ್ದಾರೆ, ಅವರು ಕೂಡ ನನ್ನ ಹತ್ತಿರ ಬಂದು ಅದರ ಬಗ್ಗೆ ಸಾಕಷ್ಟು ಮಾಹಿತಿನ್ನು ಕೊಟ್ಟಿದ್ದಾರೆ, ಸ್ಪಷ್ಟವಾದ ಸ್ಟೋನ್ ಕ್ರಷರ್ಸ್ ಶಾಸನ ಮತ್ತು ನೀತಿಯನ್ನು ಕೂಡ ಸೋಮವಾರ ತರುತ್ತೇವೆ.

8. ಗಮನ ಸೆಳೆಯುವ ಸೂಚನೆ

(1) ವಿಷಯ: ರಾಜ್ಯದಲ್ಲಿ ವಿವಿಧ ರೀತಿಯಲ್ಲಿ ಕ್ರೀಡೆಯಲ್ಲಿ ಅನುಭವ ಹೊಂದಿರುವ ಕ್ರೀಡಾ ಪಟುಗಳು ಸ್ಟೇಡಿಯಂಗಳ ಅಭಾವ ಹಾಗೂ ಇನ್ನಿತರ ಸೌಲಭ್ಯಗಳಿಲ್ಲದೇ ಬೇರೆ ರಾಜ್ಯಗಳಿಗೆ ವಲಸೆ ಹೋಗುತ್ತಿರುವುದರ ಬಗ್ಗೆ

ಶ್ರೀ ಎನ್. ಸಂಪಂಗಿ: ಸನ್ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ವಿವಿಧ ರೀತಿಯ ಕ್ರೀಡೆಗಳಲ್ಲಿ ಅನುಭವಗಳಿಸಿರುವ ಕ್ರೀಡಾಪಟುಗಳಿಗೆ ಹೆಚ್ಚಿನ ಉತ್ತೇಜನ ಇನ್ನೂ ಹೆಚ್ಚಿನ ಅನುಭವಗಳಿಸಲು ಸಾಕಷ್ಟು ಸ್ಟೇಡಿಯಂ ಕೊರತೆ ಹಾಗೂ ಇನ್ನಿತರೆ ಸೌಲಭ್ಯಗಳಿಲ್ಲದೆ ಅನೇಕ ಕ್ರೀಡಾಪಟುಗಳು ಬೇರೆ ಬೇರೆ ರಾಜ್ಯಗಳಿಗೆ ವಲಸೆ ಹೋಗುತ್ತಿದ್ದು, ರಾಜ್ಯದಲ್ಲಿ ನುರಿತ ಕ್ರೀಡಾಪಟುಗಳ ಕೊರತೆ ಇರುವ ಬಗ್ಗೆ ಮತ್ತು ಕೇಂದ್ರ ಸರ್ಕಾರದಿಂದ ಪ್ರತಿ ವರ್ಷ ಸಿಗುತ್ತಿರುವ ಅನುದಾನವನ್ನು ಸಮರ್ಪಕವಾಗಿ ಉಪಯೋಗಿಸಿಕೊಳ್ಳದೆ ರಾಜ್ಯ ಸರ್ಕಾರ ನಿರ್ಲಕ್ಷ ಧೋರಣೆತಾಳಿದ್ದು, ಇದರಿಂದ ಕ್ರೀಡಾಪಟುಗಳಿಗೆ ತೊಂದರೆಯಾಗಿರುವ ಬಗ್ಗೆ ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಹಾಗೂ ಯುವಜನ ಸೇವಾ ಸಚಿವರ ಗಮನ ಸೆಳೆಯಬಯಸುತ್ತೇವೆ.